

**ಹೆಸರು:** ಬಿಸಿಬೇಳೆಬಾತ್
**ನಿರ್ದೇಶನ:** ಅರವಿಂದ್ ಕೌಶಿಕ್
**ನಿರ್ಮಾಣ:** ಶಿಲ್ಪಾ ಅರವಿಂದ್, ನವೀನ್ ಸಾಗರ್, ಅರವಿಂದ್ ಕೌಶಿಕ್
**ಛಾಯಾಗ್ರಹಣ:** ಎಂ.ಎಸ್. ಕ್ರಿಶ್
**ಸಂಕಲನ:** ಗುರುಮೂರ್ತಿ ಹೆಗಡೆ
**ಸಂಗೀತ:** ಅರ್ಜುನ್ ರಾಮು
**ತಾರಾಗಣ:** ರಾಕೇಶ್ ಮಯ್ಯ, ಸುಂದರ್, ಕುಮುದವಲ್ಲಿ ಅರುಣ್‌ಮೂರ್ತಿ

# ತಣ್ಣಗಿನ ಬಿಸಿಬೇಳೆಬಾತ್!

**ಮಹಾನಗರದ ನಾಗಾಲೋಟದಲ್ಲಿ ಕಳೆದುಹೋದ ಹುಡುಗನೊಬ್ಬನ ಬದುಕಿನ ಕಥೆಯನ್ನು ಹೇಳುವ ಪ್ರಯತ್ನವನ್ನು ಈ ಕಿರುಚಿತ್ರ ಮಾಡಿದೆ.**

■ ಗೌರಿ

ನಮ್ಮಲ್ಲಿ ಹಳ್ಳಿಗಳ ಕುರಿತಾಗಿ ಒಂದು ಜನಪ್ರಿಯ ಗ್ರಹಿಕೆಯಿದೆ. 'ಹಳ್ಳಿಗಳಲ್ಲಿನ ಯುವಕರೆಲ್ಲ ಹಣದ ಬೆನ್ನುಬಿದ್ದು ನಗರ ಸೇರುತ್ತಿದ್ದಾರೆ; ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ' ಎಂಬುದೇ ಆ ಜನಪ್ರಿಯ ಗ್ರಹಿಕೆ. ಮಹಾನಗರದ, ಅದರಲ್ಲಿಯೂ 'ಟೆಕ್ಕಿ'ಗಳ ಬದುಕಿನ ಕುರಿತೂ ಇಂಥದ್ದೇ ಇನ್ನೊಂದು ಜನಪ್ರಿಯ ನಂಬಿಕೆ ಇದೆ. 'ಹಣದ ಬೆನ್ನುಬಿದ್ದ ಅವರು, ಮನುಷ್ಯ ಸಂಬಂಧಗಳ ಲೋಕದಿಂದ ಕಳಚಿಕೊಂಡು ಬರೀ ಗ್ಯಾಜೆಟ್ ಲೋಕದಲ್ಲಿ ಬದುಕುತ್ತಾರೆ' ಎನ್ನುವುದು ಆ ನಂಬಿಕೆ. ಹಲವು ಜೋಕುಗಳು, ಸಿನಿಮಾಗಳು, ಬರಹಗಳು ಆ ಜನಪ್ರಿಯ ಗ್ರಹಿಕೆಯನ್ನೇ ಉಜ್ಜಿ, ಕೃತಕ ಹೊಳಪನ್ನು ಹುಟ್ಟಿಸಿ ಅದಷ್ಟೇ ನಿಜ ಎಂಬಂತೆ ಬಿಂಬಿಸುತ್ತಿವೆ. ಆ ಹೊಳಪು ಎಷ್ಟು ಪ್ರಖರವಾಗಿದೆಯೆಂದರೆ ಆ ಕುರಿತು ಕಲಾಕೃತಿಯನ್ನು ಕಟ್ಟಲು ಹೊರಡುವ ಬಹುತೇಕರು ಆ ಜನಪ್ರಿಯ ಗ್ರಹಿಕೆಯ ಪ್ರಖರತೆಯಿಂದ ಪಾರಾಗುವುದು ಬಹಳೇ ಕಷ್ಟ.

ಅರವಿಂದ್ ಕೌಶಿಕ್ ಅವರ ಕಿರುಚಿತ್ರ 'ಬಿಸಿಬೇಳೆ ಬಾತ್' ನಗರ ಬದುಕಿನ ನಾಗಾಲೋಟದಲ್ಲಿ ಸಿಕ್ಕಿರುವ ಹುಡುಗನೊಬ್ಬನ ಬದುಕನ್ನು ಬಿಂಬಿಸುವ ಪ್ರಯತ್ನ. ಈ ಚಿತ್ರ ಭಾವುಕವಾಗಿ ಮನಸ್ಸು ತಟ್ಟುವಲ್ಲಿ ಕೆಲಮಟ್ಟಿಗೆ ಯಶಸ್ವಿಯಾಗಿದೆ.

ವೃತ್ತಿಬದುಕಿನ ಮಹತ್ವಾಕಾಂಕ್ಷೆ ಮತ್ತು ಹಣಗಳಿಕೆಯ ಧಾವಂತಕ್ಕೆ ಸಿಲುಕಿದ ತರುಣನೊಬ್ಬನ ಬದುಕಿನ ಮೂಲಕ ಬೆಲೆ ಕಳೆದುಕೊಳ್ಳುತ್ತಿರುವ ಮನುಷ್ಯ ಸಂಬಂಧಗಳ ಕುರಿತು ಈ ಕಿರುಚಿತ್ರ ಹೇಳಹೊರಟಿದೆ ಎನ್ನಬಹುದು. ಭಾವುಕ ನೆಲೆಗಟ್ಟಿಯಲ್ಲಿ ಈಗಾಗಲೇ ತುಂಬ ಸಲ ಹೇಳಿದ್ದನ್ನೇ ಮತ್ತೊಮ್ಮೆ ಹೇಳುತ್ತ ಮೈಮರೆಸುತ್ತದೆ. ಈ ಮೈಮರೆಸುವಿಕೆ, ಚಿತ್ರ ಹುಟ್ಟಬೇಕಾದ ಪ್ರಶ್ನೆಗಳನ್ನು ಮರೆಸುವ ಹೊಂಚಾಗಿಯೂ ಕಾಣುತ್ತದೆ.

ಹೀಗೆ ಎಲ್ಲ ಮರೆತು ಕೆಲಸದಲ್ಲಿ ಮುಳುಗಿಹೋದವರ ದುರಂತವನ್ನು ಹೇಳುವ ಕಥೆಗಳ ನಾಯಕರೆಲ್ಲ 'ಟೆಕ್ಕಿ'ಗಳೇ ಆಗಿಸುವುದರಲ್ಲಿಯೇ ಜಾಣ ಅಂಧತ್ವವಿದೆ. ಮಹಾನಗರವೆಂಬ ಗ್ರೈಂಡರಿನಲ್ಲಿ ಸುತ್ತುತ್ತಿರುವ ಎಲ್ಲರ ಪರಿಸ್ಥಿತಿ ಇದೇ. ಒಬ್ಬ ಆಟೊ/ಬಸ್ ಡ್ರೈವರ್‌ನಿಂದ ಹಿಡಿದು, ಸಿನಿಮಾ ವ್ಯಾಮೋಹದಲ್ಲಿ ಮುಳುಗಿಹೋಗಿರುವ ನಿರ್ದೇಶಕ ಕೂಡ ಕುಟುಂಬದ ಜೊತೆ ಸಮಯ ಕಳೆಯಲು ಹೆಣಗುತ್ತಿರುತ್ತಾನೆ. ಯಾವ್ಯಾವುದೋ ಆಕಾಂಕ್ಷೆಗಳ ಹಿಂದೆ ಓಡುತ್ತಿರುತ್ತಾನೆ. ಆದರೆ ಟೆಕ್ಕಿಗಳು ದುಡಿದಷ್ಟು ಹಣ ಉಳಿದ ವರ್ಗದ ಎಲ್ಲರಿಗೂ ದುಡಿಯಲು ಸಾಧ್ಯವಾಗುವುದಿಲ್ಲ ಎನ್ನುವುದೇ ಅವರ ಮೇಲೆ ನಮ್ಮೆಲ್ಲರ 'ಕಣ್ಣು' ಬೀಳುವುದಕ್ಕೆ ಕಾರಣ ಇದ್ದರೂ ಇರಬಹುದು. ಮಗನ ಒತ್ತಡದ ಕೆಲಸದಿಂದ ದುಡಿದ ಹಣದಿಂದಲೇ ಐಷಾರಾಮಿ ಬದುಕನ್ನು ಪಡೆದುಕೊಂಡ ಅಮ್ಮ, ಮಗನಿಗೆ 'ರಜೆ ಹಾಕಿ ನಮ್ಮ ಜೊತೆಗೆ ಟೈಮ್ ಸ್ಪೆಂಡ್ ಮಾಡು' ಎಂದು ಹೇಳುವುದರಲ್ಲಿಯೇ ಬಹುಸೂಕ್ಷ್ಮವಾದ ಆಷಾಢಭೂತಿತನ ಇದೆಯಲ್ಲವೇ?

ಇದು ರಾಕಿಯ ಒಳಗಿರುವ ಸಮಸ್ಯೆಯೇ? ತಾನು ಯಾವುದು ಆಗಲಿಕ್ಕಾಗಿ ತರಬೇತಿ ಪಡೆದಿದ್ದೆನೋ, ಯಾವುದರಿಂದ ತನಗೆ, ಕುಟುಂಬಕ್ಕೆ ಐಷಾರಾಮದ ಬದುಕನ್ನು ದೊರಕಿಸಿಕೊಂಡಿದ್ದೇನೆಯೋ ಆ ವೃತ್ತಿ ಬೇಡುವ ಹಾಗೆ ತನ್ನನ್ನು ತಾನು ತೆತ್ತುಕೊಳ್ಳುವುದು, ಅದರಲ್ಲಿ ಮಹತ್ವಾಕಾಂಕ್ಷೆ ಇಟ್ಟುಕೊಳ್ಳುವುದು ತಪ್ಪೆಂದು ಹೇಗೆ ಹೇಳುವುದು? ಅವನನ್ನು, ಅವನೊಳಗಿನ ಆಸೆಯನ್ನು ಹುಟ್ಟಿಸಿದ್ದು ಈ ಸಮಾಜವೇ ಅಲ್ಲವೇ? ಹಾಗಾದರೆ ಸಮಸ್ಯೆ ಇರುವುದು ರಾಕಿಯಲ್ಲಿಯೇ, ಸಮಾಜದ ವ್ಯವಸ್ಥೆಯಲ್ಲಿಯೇ? ನಿಜಕ್ಕೂ ಮನುಷ್ಯ ಸಂಬಂಧಗಳು ಎನ್ನುವುದು ಬೆಳೆಯುವುದು, ಉಳಿಯುವುದು ಅವುಗಳಿಗೆ ಸಮಯ ನೀಡಿದಾಗ ಮಾತ್ರವೇ? ಹಾಗಾದರೆ ಬೆಳಿಗ್ಗೆ ಒಂಬತ್ತರಿಂದ ಐದರವರೆಗೆ ಕೆಲಸ ಮಾಡುವ ಎಲ್ಲ ಸರ್ಕಾರಿ ನೌಕರರ ಮನೆ ನಂದನವನವಾಗಿರಬೇಕಷ್ಟೆ.

'ಬಿಸಿಬೇಳೆಬಾತ್' ನಮ್ಮೊಳಗೆ ಹುಟ್ಟಿಸುವ ಭಾವುಕನೆಲೆಯಲ್ಲಿಯೇ ನಿಂತು ನೋಡಿದರೆ ಈ ಎಲ್ಲ ಪ್ರಶ್ನೆಗಳು ಅಪ್ರಸ್ತುತವೂ ಅಧಿಕಪ್ರಸಂಗವೂ ಆಗಿ ಕಾಣಬಹುದು. ಆದರೆ ಆ ಜಾಡಿನಿಂದ ಕೊಂಚ ಈಚೆ ನಿಂತು ಸತ್ಯವನ್ನು ದಿಟ್ಟವಾಗಿ ಎದುರಿಸುವ, ಅದರೆಲ್ಲ ಸಂಕೀರ್ಣತೆಯೊಟ್ಟಿಗೇ ಕಾಣುವ ಉದ್ದೇಶ ಇದ್ದವರಿಗೆ 'ಬಿಸಿಬೇಳೆಬಾತ್' ಕೊಂಚ ಹಳಸಿದಂತೆ ಭಾಸವಾಗುತ್ತದೆ. ನಮ್ಮನ್ನು ಭಾವುಕವಾಗಿ ಮೈಮರೆಸುವ ಕಲಾಕೃತಿಗಳು ನಮ್ಮ ನೋವನ್ನು ವಾಸಿಗೊಳಿಸುವುದಿಲ್ಲ; ಅರೆಕ್ಷಣ ಮರೆಸುತ್ತವಷ್ಟೆ. ಆದರೆ ಭಾವುಕ ನೆಲೆಗಟ್ಟಿನಲ್ಲಿಯೇ ವಾಸ್ತವಕ್ಕೆ ಎದುರು ನಿಲ್ಲುವ ಪ್ರಯತ್ನಗಳು ನಮ್ಮ ನೋವಿನ ಮೂಲವನ್ನು ಅರಿತುಕೊಳ್ಳಲು ಪ್ರಚೋದಿಸುತ್ತವೆ. 'ಬಿಸಿಬೇಳೆಬಾತ್' ಮೊದಲನೇ ವರ್ಗಕ್ಕೆ ಸೇರುವ ಕಿರುಚಿತ್ರ. ■

ಈ ಕಿರುಚಿತ್ರ ವೀಕ್ಷಣೆಗೆ bit.ly/33BIfMV ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.